ಇ) ಈ ಕೆಳಕಂಡ ಅಂಶಗಳು ಕಾಡಾ ಕೆಲಸ ವಿಳಂಬವಾಗುವುದಕ್ಕೆ ಕಾರಣಗಳಾಗಿರುತ್ತದೆ.

1. ಬೆಳೆದು ನಿಂತ ಬೆಳೆ ಹಾಗೂ ಕಡಿಮೆ ಕೆಲಸದ ಅವಧಿ.

2. ರೈತರಿಂದ ಸಾಲದ ಪತ್ರಗಳಿಗೆ ಸಹಿ ಮಾಡುವಲ್ಲಿ ಅಸಹಕಾರ ಹಾಗೂ ಬ್ಯಾಂಕುಗಳಿಂದ ಸಾಲ ವಿತರಣೆಯಲ್ಲಿ ಆಗಿರುವ ವಿಳಂಬ.

3. ಅರಣ್ಯ ಇಲಾಖೆಯಿಂದ ಕಾಲುವೆ ನಿರ್ಮಾಣಕ್ಕೆ ಪರವಾನಿಗಿ ನೀಡದಿರುವುದು ಕೃಷ್ಣಾ ನದಿಯ ತೀರದ ರೈತರು ಬಾವಿಗಳ ಕಾಲುವೆಗಳಿಂದ ನೀರು ಒದಗಿಸುವುದು ಹಾಗೂ ರೈತರ ಒಳಜಗಳ.

4. ಬೆಳೆದು ನಿಂತ ಬೆಳೆ ಇರುವುದರಿಂದ ವಾರಾಬಂದಿ ಕೆಲಸ ಕೈಕೊಳ್ಳುವಲ್ಲಿ ಅಡಚಣೆಯಾಗಿರುವುದು. ಇವೆಲ್ಲ ಕಾರಣಗಳಿಂದ ಕಾಡಾ ಕೆಲಸವು ವಿಳಂಬವಾಗಿರುತ್ತದೆ.

**ಖಾದಿ ಬೋರ್ಡಿನಲ್ಲಿ ಅಕ್ರಮ ಮತ್ತು ದುರ್ವ್ಯವಹಾರ**

469 - ಶ್ರೀ ಕೆ. ಲಕ್ಕಪ್ಪ ( ಕುಣಿಗಲ್) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಖಾದಿ ಬೋರ್ಡಿನಲ್ಲಿ ಆಗಿರುವ ದುರುಪಯೋಗ ಹಾಗೂ ಭ್ರಷ್ಟಾಚಾರ/ ಅಪಾದನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?*

*ಇ) ಈ ಖಾದಿ ಬೋರ್ಡಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಕ್ರಮ ಕಾರ್ಯಗಳಲ್ಲಿ ಭಾಗವಹಿಸಿ ಖಾದಿ ಮಂಡಳಿಗೆ ನಷ್ಟ ಮಾಡಿರುವುದರ ಬಗ್ಗೆ ಸರ್ಕಾರದವರಿಗೆ ದೂರುಗಳೇನಾದರೂ ಬಂದಿದೆಯೇನು, ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಹೌದು. ಆದರೆ ಅನಾಮಧೇಯ ಹಾಗೂ ಹುಸಿ ಅರ್ಜಿಗಳು.

ಆ) ಪರಿಶೀಲಿಸಲಾಗುತ್ತಿದೆ.

ಇ) ಹೌದು. ಅನಾಮಧೇಯ ಹಾಗೂ ಹುಸಿ ಅರ್ಜಿಗಳು. ಪರಿಶೀಲಿಸಲಾಗುತ್ತಿದೆ.

**ದಕ್ಷಿಣ ಕನ್ನಡದಲ್ಲಿ ಸಣ್ಣ ಕೈಗಾರಿಕೆಗಳು**

1052 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಈವರೆಗೆ ಎಷ್ಟು ಶೆಡ್ಡುಗಲನ್ನು ನಿರ್ಮಿಸಲಾಗಿದೆ?*

*ಆ) ಇದಕ್ಕಾಗಿ ಎಷ್ಟು ಎಕರೆ ಜಮೀನು ನೀಡಲಾಗಿದೆ? 1990ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಎಷ್ಟು ಬಂಡವಾಳ ಒದಗಿಸಿಕೊಡಲಾಗಿದೆ?*

*ಇ) ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರಕಿರುತ್ತದೆ?*

ಶ್ರೀ ನಸೀರ್ ಅಹಮದ್(ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) :

ಅ) 259.

ಆ) 101.17 ಎಕರೆ.

1990ನೇ ಡಿಸೆಂಬರ್ ಅಂತ್ಯದವರೆಗೆ 230 ಘಟಕಗಳು ಸ್ಥಾಪಿಸಲ್ಪಟ್ಟಿವೆ. ಸುಮಾರು ರೂ. 256 ಲಕ್ಷಗಳು.

ಇ) ಸುಮಾರು 1,500.